
## ನೆಲ್ಸನ್ ಮಂಡೇಲಾ




ಭೂ ವಿಜ್ಞಾನಿ ಡಾ. ಎಂ. ವೆಂಕಟಸ್ವಾಮಿ ಅವರು ಭೂಮಿಯ ಕಾಳಜಿಗೆ ಸಂಬಂಧಿಸಿದ ಬರಹಗಳ ಮೂಲಕ ಓದುಗರಿಗೆ ಪರಿಚಿತರು. 'ಕೋಲಾರ ಚಿನ್ನದ ಗಣಿಗಳು' ಅವರ ಪಿಎಚ್. ಡಿ. ಅಧ್ಯಯನದ ಸಂಶೋಧನಾ ಕೃತಿ. ಪ್ರಸಕ್ತ 'ನೆಲ್ಸನ್ ಮಂಡೇಲಾ' ಜೀವನ ಚರಿತ್ರೆ, ಲೇಖಕರು ನೆಚ್ಚಿದ ಮೌಲ್ಯಗಳ ನಂಬಿಕೆಯ ಅಭಿವ್ಯಕ್ತಿಯಂತಿದೆ.

ಸ್ವಾತಂತ್ರ್ಯದ ಅರಿವು ಮತ್ತು ಮಹತ್ವದ ಬಗ್ಗೆ ವಿಶ್ವಕ್ಕೆ ಮಾದರಿಯಾದ ಶ್ರೇಷ್ಠ ವ್ಯಕ್ತಿತ್ವಗಳಲ್ಲಿ ಮಂಡೇಲಾ ಒಬ್ಬರು. ಗಾಂಧಿಯಿಂದ ಪ್ರೇರಣೆಯನ್ನು ಪಡೆದ ಮಂಡೇಲಾ ಭಾರತೀಯ ಮನಸ್ಸುಗಳಿಗೂ ಹತ್ತಿರವಾದವರು. ಅವರ ಜೀವನ ಚರಿತ್ರೆಯನ್ನು ವೆಂಕಟಸ್ವಾಮಿ ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ. ಮಂಡೇಲಾರ 'ಲಾಂಗ್ ವಾಕ್ ಟು ಫ್ರೀಡಂ' ಸೇರಿದಂತೆ ಹಲವು ಕೃತಿಗಳನ್ನು ಆಧರಿಸಿ ಈ ಜೀವನ ಚರಿತ್ರೆ ಕಟ್ಟಲಾಗಿದೆ. ಹನ್ನೆರಡು ಅಧ್ಯಾಯಗಳ ಈ ಕೃತಿ, ರಾಜಕೀಯವಾಗಿ ದಕ್ಷಿಣ ಆಫ್ರಿಕಾ ಹೊಸ ಹುಟ್ಟು ಪಡೆಯುವುದಕ್ಕೆ ಮಂಡೇಲಾ ಹೇಗೆ ಕಾರಣರಾದರು ಎನ್ನುವುದನ್ನು ವಿಸ್ತೃತವಾಗಿ ದಾಖಲಿಸಿದೆ. ಭಾರತದೊಂದಿಗಿನ ಮಂಡೇಲಾರ ನಂಟು ಹಾಗೂ ಗಾಂಧಿಯೊಂದಿಗಿನ ಅವರ ಹೋಲಿಕೆ ಕುರಿತಂತೆ ಸಾಕಷ್ಟು ವಿವರಗಳು ಕೃತಿಯಲ್ಲಿವೆ. ಮಂಡೇಲಾಪ್ರಿಯರಿಗೆ ಮಾತ್ರವಲ್ಲದೆ, ಸ್ವಾತಂತ್ರ್ಯದ ಮಹತ್ವದ ಬಗ್ಗೆ ಕಾಳಜಿಯುಳ್ಳ ಎಲ್ಲರಿಗೂ ಈ ಕಥನ ರುಚಿಸುವಂತಿದೆ.

**ಲೇ: ಡಾ. ಎಂ. ವೆಂಕಟಸ್ವಾಮಿ, ಪು: 332; ಬೆ: ₹ 350; ಪ್ರ: ನವಕರ್ನಾಟಕ, ಬೆಂಗಳೂರು. ಫೋನ್: 080-22161900.**

## ಮುಟ್ಟು




ಗ್ರಾಮೀಣ ಕರ್ನಾಟಕದ ಜೀವದ್ರವ್ಯವನ್ನು ಹಿಡಿದಿಡುವ ಪ್ರಯತ್ನದ 'ಮುಟ್ಟು' ಸಂಕಲನದ ಕಥೆಗಳು ಅಭಿವ್ಯಕ್ತಿಯ ಸಾಚಾತನ ಮತ್ತು ಸಾಮಾಜಿಕ ಕಾಳಜಿಯ ವಸ್ತುಗಳಿಂದ ಗಮನಸೆಳೆಯುವ ಕಥೆಗಳು. ಇಲ್ಲಿನ ಹದಿನೈದು ಕಥೆಗಳು ಮನುಷ್ಯನ ಬದುಕಿನ ಹಲವು ಯಾತನೆಗಳನ್ನು ಶೋಧಿಸುವ ಪ್ರಯತ್ನ ನಡೆಸಿವೆ. ಸಂಕಲನದ ಶೀರ್ಷಿಕೆ ಕಥೆಯಾದ 'ಮುಟ್ಟು' ಹೆಣ್ಣಿನ ಋತುಚಕ್ರವನ್ನು ಸಂಕೇತಿಸುವಂತೆಯೇ, ಮನುಷ್ಯ ಸ್ಪರ್ಶದ ಕುರಿತ ಮಾತೂ ಆಗಿದೆ. ಹಲವು ರೂಪಗಳಲ್ಲಿ ಆಚರಣೆಯಲ್ಲಿರುವ ಅಸ್ಪೃಶ್ಯತೆಯನ್ನು ತೊಡೆದುಹಾಕಿ, ಪರಸ್ಪರ ಅಂತರಂಗವನ್ನು 'ಮುಟ್ಟು'ವ ಹಂಬಲ ಇಲ್ಲಿನ ಕಥೆಗಳನ್ನು ರೂಪಿಸಿದೆ. ನೋವಿನ ಕುರಿತ ಚಿತ್ರಣಗಳ ಕಥನಗಳು ಮನುಷ್ಯ ಸಾಗಬೇಕಾದ ಹಾದಿಯನ್ನು ಸೂಚಿಸುವಂತಿವೆ.

ಮಲ್ಲಿಕಾರ್ಜುನರು ತಮ್ಮ ಕಥೆಗಳ ಮೂಲಕ ಕಟ್ಟಿಕೊಟ್ಟಿರುವ ಪಾತ್ರ ಪ್ರಪಂಚ ವೈವಿಧ್ಯಮಯವಾದುದು, ಸಮಾಜದ ಎಲ್ಲ ವರ್ಗಗಳನ್ನೂ ಸಂಕೇತಿಸುವಂತಹದ್ದು. ಈ ಪಾತ್ರಗಳು ವರ್ತಮಾನದ 'ಸಾಮಾಜಿಕ ಸಂಗ್ರಹಾಲಯ'ದಂತೆ ಕಾಣಿಸುತ್ತವೆ. ಸುಡುಕೆಂಡಗಳಂಥ ವಾಸ್ತವವನ್ನೂ ಕಥೆಗಾರರು ಸಾಕಷ್ಟು ಸಂಯಮದಿಂದಲೇ ಚಿತ್ರಿಸಿರುವುದು ಗಮನಾರ್ಹ.

**ಲೇ: ಮಲ್ಲಿಕಾರ್ಜುನ ಕಡಕೋಳ; ಪು: 164; ಬೆ: ₹ 10; ಪ್ರ: ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ. ಫೋನ್: 94481 24431.**